ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1459
2. ಸದಸ್ಯರ ಹೆಸರು : ಶ್ರೀ ಎನ್. ರವಿಕುಮಾರ್
3. ಉತ್ತರಿಸುವ ದಿನಾಂಕ : 19.03.2020
4. ಉತ್ತರಿಸುವ ಸಚಿವರು : ಮುಖ್ಯಮಂತ್ರಿ

ಕ್ರಮ ಸಂಖ್ಯೆ	ಪ್ರಶ್ನೆ	ಉತ್ತರ
ಅ)	2011ರಲ್ಲಿ ಕೆ.ಪಿ.ಎಸ್.ಸಿ. ಮೂಲಕ ಆಯ್ಕೆಯಾಗಿರುವ 362 ಕೆ.ಎ.ಎಸ್. ಅಭ್ಯರ್ಥಿಗಳ ಕುರಿತು ಸರ್ಕಾರದ ನಿಲುವೇನು; ಆಯ್ಕೆಯಾಗಿರುವ ಅಭ್ಯರ್ಥಿಗಳಿಗೆ ನೇಮಕಾತಿ ಆದೇಶ ನೀಡಲಾಗುವುದೇ;	2011ನೇ ಸಾಲಿನ ಗೆಜೆಟೆಡ್ ಪ್ರೊಬೇಷನರ್ಸ್ ನೇಮಕಾತಿ ಸಂಬಂಧ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ದಾಖಲಿಸಿದ್ದ ರಿಟ್ ಅರ್ಜಿ ಸಂಖ್ಯೆ: 13617-27/2017 & 14529/2017 ಪ್ರಕರಣಗಳಲ್ಲಿ ಮಾನ್ಯ ಉಚ್ಚ ನ್ಯಾಯಲಯವು ನೀಡಿದ ದಿ: 09.03.2018ರ ಅಂತಿಮ ತೀರ್ಪಿನಲ್ಲಿ ನೇಮಕಾತಿಗೆ ಸಂಬಂಧಿಸಿದಂತೆ ಹೊರಡಿಸಲಾದ ಅಧಿಸೂಚನೆ/ಅಂತಿಮ ಆಯ್ಕೆ ಪಟ್ಟಿ/ಅನಧಿಕೃತ ಟಪ್ಪಣಿ/ನೇಮಕಾತಿ ಆದೇಶಗಳನ್ನು ಹಾಗೂ ಮಾನ್ಯ ಕರ್ನಾಟಕ ಆಡಳಿತ ನ್ಯಾಯಮಂಡಳಿಯು ನೀಡಿರುವ ದಿ: 19.10.2016ರ ತೀರ್ಪನ್ನು ರದ್ದುಪಡಿಸಿ, ಆಯೋಗಕ್ಕೆ ನೇಮಕಾತಿ ಆಯ್ಕೆ ಪ್ರಕ್ರಿಯೆಯನ್ನು ಜರುಗಿಸಲು ರಿಕ್ತ ಸ್ಥಾನಗಳನ್ನು ಬಿಡುಗಡೆ ಮಾಡಲಾಗಿದ್ದ ಪತ್ರಗಳನ್ನು ಹಿಂಪಡೆದು ನೇಮಕಾತಿ ಪ್ರಕ್ರಿಯೆಯನ್ನು ಮುಕ್ತಾಯಗೊಳಿಸಿದ್ದ ದಿ: 14.08.2014ರ ಸರ್ಕಾರಿ ಆದೇಶವನ್ನು ಎತ್ತಿಹಿಡಿದಿರುತ್ತದೆ. ಮುಂದುವರೆದು, 2011ನೇ ಸಾಲಿನ ಅಭ್ಯರ್ಥಿಗಳು ದಾಖಲಿಸಿದ್ದ ಎಸ್.ಎಲ್.ಪಿ. ಮತ್ತು ಮರುಪರಿಶೀಲನಾ ಅರ್ಜಿಗಳನ್ನು ಹಾಗೂ ಸರ್ಕಾರದ ವತಿಯಿಂದ ದಾಖಲಿಸಿದ್ದ ಎಸ್.ಎಲ್.ಪಿ. ಅರ್ಜಿಯನ್ನು ಮಾನ್ಯ ಸರ್ವೋಚ್ಚ ನ್ಯಾಯಾಲಯವು ವಜಾಗೊಳಿಸಿರುತ್ತದೆ.
ಆ)	ಪ್ರಸ್ತುತ ಕೆ.ಪಿ.ಎಸ್.ಸಿ. ಮೂಲಕ ಹೊಸದಾಗಿ ಅರ್ಜಿ ಕರೆಯಲಾಗಿರುವ ಗೆಜೆಟೆಡ್ ಹುದ್ದೆಗಳೊಂದಿಗೆ 2011ರಲ್ಲಿ ಆಯ್ಕೆಯಾಗಿರುವ 362 ಹುದ್ದೆಗಳನ್ನು ಸೇರಿಸಿ ಹೊಸದಾಗಿ ಅಷ್ಟು ಹುದ್ದೆಗಳಿಗೆ ಅರ್ಜಿ ಕರೆಯುವ ಪ್ರಸ್ತಾವ ಸರ್ಕಾರದ ಮುಂದಿದೆಯೇ; ಈ ಕುರಿತು ಸರ್ಕಾರದ ನಿಲುವೇನು;	ಸಧ್ಯಕೆ ಪ್ರಸ್ತಾವನೆ ಇರುವುದಿಲ್ಲ.
ಇ)	2011ರಲ್ಲಿ ಕೆ.ಪಿ.ಎಸ್.ಸಿ. ಮೂಲಕ ಆಯ್ಕೆಯಾಗಿರುವ ಎಲ್ಲಾ 362 ಕೆ.ಎ.ಎಸ್.	2011ನೇ ಸಾಲಿನ ಗೆಜೆಟೆಡ್ ಪ್ರೊಬೇಷನರ್ಸ್ ನೇಮಕಾತಿ ಪ್ರಕ್ರಿಯೆಯಲ್ಲಿ ಆಯ್ಕೆಯಾಗಿದ್ದ ಯಾವುದೇ ಅಭ್ಯರ್ಥಿಗಳ ವಿರುದ್ಧ

	ಅಭ್ಯರ್ಥಿಗಳ ಆಯ್ಕೆಯು ಭ್ರಷ್ಟಾಚಾರದ ಮೂಲಕವೇ ಆಗಿದೆ ಎಂದು ಸರ್ಕಾರ ನಿರ್ದರಿಸಿದೆಯೇ: ಭ್ರಷ್ಟಾಚಾರ ನಡೆಸಿದ ಎಷ್ಟು ಅಭ್ಯರ್ಥಿಗಳ ಮೇಲೆ ಕೇಸು ದಾಖಲಾಗಿದೆ?	ಕೇಸು ದಾಖಲಾಗಿರುವುದಿಲ್ಲ.

ಸಂಖ್ಯೆ: ಸಿಆಸುಇ 20 ಎಸ್‌ಎಸ್‌ಸಿ 2020

ಬಿ.ಎಸ್. ಯಡಿಯೂರಪ್ಪ
(ಬಿ.ಎಸ್. ಯಡಿಯೂರಪ್ಪ)
ಮುಖ್ಯಮಂತ್ರಿ